## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 30-08-2021 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: **ಐ12(5)ಪಿಆರ್/35/2020-21/21-09-2020ರ** ಆದೇಶದಂತೆ ದಿನಾಂಕ: 30-08-2021 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ -89 ಜೋಗುಪಾಳ್ಯ ವಾರ್ಡ್ ಕಛೇರಿ 1ನೇ ಮಹಡಿ ಗುಂಡಪ್ಪ ಪಾರ್ಕ್ ಪಕ್ಕಾ 1ನೇ ಕ್ರಸ್ ಕ್ರೈಂಬ್ರಿಡ್ಜ್ ರಸ್ತೆ ಬೆಂಗಳೂರು ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ಸಭೆಗೆ ಹಾಜರಿದ್ದವರ ವಿವರಗಳು

1) ಶ್ರೀ.ಬಿ ಮಹೇಶ್ ಕುಮಾರ್. ನೋಡಲ್ ಅಧಿಕಾರಿ.ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ).
2) ಶ್ರೀ ಮೂರ್ತಿ ಸಹಾಯಕ ಅಭಿಯಂತರರು ಶ್ರೀಕಾಂತ್ ಕಿರಿಯ ಆರೋಗ್ಯ ಪರಿವೀಕ್ಷಕರು. ಡಾ।। ಕುಸುಮಾ ವೈಧ್ಯಾಧಿಕಾರಿ ಜೋಗುಪಾಳ್ಯ ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಧಿಕಾರಿಗಳು ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ರಾಜೇಶ್, ಹೇಮಂತ್ ನಾಗ್ ಹಾಗೂ ವಾರ್ಡಿನ ನಾಗರಿಕರಾದ ಶ್ರೀ ಮುನಿರಾಜು. ವಿಜಯಲಕ್ಷ್ಮೀ. ಕೃಷ್ಣಮೂರ್ತಿ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮೀತಿ ಸದಸ್ಯರು ಹಾಗೂ ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

## ವಾರ್ಡ್ ಕಮಿಟಿ ಸದಸ್ಯರ ಸಭೆಯಲ್ಲಿ ಚರ್ಚಿಸಿದಂತಹ ವಿಷಯಗಳು :-

### ಕಸದ ಸಮಸ್ಯೆ

ಉಮೇಶ್ ವಾರ್ಡ್ ಸದಸ್ಯರು ಈ ಹಿಂದೆ ಚರ್ಚಿಸಲಾದ ಕಸದ ಸಮಸ್ಯ ಬಗ್ಗೆ ಚರ್ಚಿಸಲಾಯಿತು ನೋಡೆಲ್ ಅಧಿಕಾರಿ ರವರು ಸಂಬಂಧಪಟ್ಟ ವಾರ್ಡ್ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ವಾರ್ಡಿನಲ್ಲಿ ಸರಿಯಾಗಿ ಮನೆ ಮನೆಯಿಂದ ಕಸ ವಿಲೇವರಿ ಆಗುತ್ತಿಲ್ಲವೆಂದು ಇದಕ್ಕೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷರು ರವರು ಪ್ರತಿದಿನ ಕಸ ತೆಗೆಯಲಾಗುತ್ತಿದೆ ಎಂದು ಸಂಬಂಧಪಟ್ಟ ದೂರಿನ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಶ್ರೀ ಕೃಷ್ಣಮೂರ್ತಿ ರವರು ಮನೆ ಮನೆ ಕಸ ಸಂಗ್ರಹಣೆ ವೇಳೆ ಜೋರಾಗಿ ಸೀಟಿ ಹೊಡೆಯಲು ಆಟೋ ರಿಕ್ಷದವರಿಗೆ ಸೂಚಿಸಲು ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮವಹಿಸಲು ಸೂಚಿಸಿದರು.

### ಕಾಮಗಾರಿ ಸಮಸ್ಯೆ

ಶ್ರೀ ಕೃಷ್ಣಮೂರ್ತಿ ಇಂದಿರಾನಗರ 10ನೇ ಮುಖ್ಯರಸ್ತೆ ಮತ್ತು ಅಕ್ಕಪಕ್ಕದಲ್ಲಿರುವ ಅಡ್ಡರಸ್ತೆಗಳಿಗೆ ಮತ್ತು ಇಲ್ತೇತೋಪು ರಸ್ತೆಗಳ ಇನ್ನೂ ಡಾಂಬರಿಕರಣ ಆಗಿರುವುದರಿಲ್ಲವೆಂದು ಹೇಳಿದರು.

ನೋಡೆಲ್ ಅಧಿಕಾರಿ ರವರು ಸಭೆಯಲ್ಲಿ ಹಾಜರಿದ್ದು ಕಾಮಗಾರಿ ಕಛೇರಿಯ ಶ್ರೀ ಮೂರ್ತಿ ಸಹಾಯಕ ಅಭಿಯಂತರವರನ್ನು ಉತ್ತರಿಸಲು ಸೂಚಿಸಿದರು.

ಶ್ರೀ ಮೂರ್ತಿ AE ರವರು ಒಂದೇ ಸಮನೆ ಮಳೆ ಬರುತ್ತಿರುವುದರಿಂದ ರಸ್ತೆಗಳಿಗೆ ಡಾಂಬಕರಣಗೊಳಸಲು ಆಗಿರುವುದಿಲ್ಲ ಮಳೆಯು ನಿಂತ ನಂತರ ಶೀಘ್ರದಲ್ಲಿ ರಸ್ತೆ ಡಾಂಬರಿಕರಣ ಮಾಡಲಾಗವುದು ಅದಕ್ಕೆ ಮುಂಚೆ. BWSSB ಮತ್ತು ಅಧಿಕಾರಿಗಳು BESCOMರವರ ತಮ್ಮ ತಮ್ಮ ಕೆಲಸಗಳನ್ನು ಅಂದರೆ ಒಳ ಚರಂಡಿ ದುರಸ್ತಿ ಹಾಗೂ ಕೇಬಲ್ ಕೆಲಸಗಳನ್ನು ಪೂರ್ಣಗೊಳಸಬೇಕಾಗಿ ರಸ್ತೆ ಡಾಂಬರಿಕರಣ ನಂತರ ಯಾವುದೇ ರಸ್ತೆ ಅಗೆಯಲು ಅನುಮತಿ ನೀಡುವುದಿಲ್ಲ ಅನುಮತಿ ಪಡೆಯದೆ ರಸ್ತೆ ಅಗೆದರೆ ಅವರ ಮೇಲೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ಕಾಮಗಾರಿಗಳಿಗೆ ಬಳಸುವ ವಸ್ತುಗಳನ್ನು ಹಾಗೂ ವಾಹನಗಳನ್ನು ಮುಟ್ಟುಗೊಲು ಮಾಡಿಕೊಳ್ಳಲಾಗುವುದು ಮತ್ತು ಕಾನೂನು ಕ್ರಮ ಜರುಗಿಸಲಾಗುವುದೆಂದು ತಿಳಸಿದರು.

**ಬೀದಿ ದೀಪಗಳ ಸಮಸ್ಯೆ:-**

ಶ್ರೀ ಕೃಷ್ಣಮೂರ್ತಿ ರವರು ಈ ಹಿಂದಿನ ಸಭೆಗಳಲ್ಲಿ ಮಂಜಪ್ಪ AE (ವಿದ್ಯುತ್)ರವರಿಗೆ ವಾರ್ಡ್‌ನಲ್ಲಿ ಬೀದಿ ದೀಪಗಳ ಸಮಸ್ಯೆ ಇದೆ ಎಂದು ಅನೇಕ ಬಾರಿ ಹೇಳಲಾಗಿತ್ತು AE ರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಈಗ ಅವರು ಪೂರ್ವ ವಲಯದಿಂದ ವರ್ಗಾವಣೆಗೊಂಡಿರುತ್ತಾರೆ ಬೀದಿ ದೀಪಗಳ ಸಮಸ್ಯೆಯನ್ನು ಸರಿ ಪಡಿಸಲು ನೋಡೆಲ್ ಅಧಿಕಾರಿಯವರಿಗೆ ಕೋರಿದರು.

ನೋಡೆಲ್ ಅಧಿಕಾರಿ ರವರು AE ಮಂಜಪ್ಪ ರವರು ವರ್ಗಾವಣೆಯಾಗಿರುವುದರಿಂದ ಬೀದಿ ದೀಪಗಳ ಸರಿ ಪಡಿಸಲು ಕಷ್ಟವಾಗಿದೆ ಅವರ ಸ್ಥಳಕ್ಕೆ ಬಂದಿರುವ ದುರ್ಗಾಪ್ರಸಾದ್ AE (ವಿದ್ಯುತ್)ರವರಿಗೆ ಈ ಸಂಬಂಧ ಕ್ರಮಕೈಗೊಳ್ಳಲು ಸೂಚಿಸಿ ಸಮಸ್ಯಯನ್ನು ಬಗೆಹರಿಸಲು ತಿಳಸಿದರು ಹಾಗೂ ಗುಂಡಪ್ಪ ಪಾರ್ಕ್ ಮತ್ತು ರೆಫೆರೆಲ್ ಆಸ್ಪತ್ರೆ ನಲ್ಲಿ ದಾರೀ ಬೀದಿ ದೀಪಗಳನ್ನು ಸರಿ ಪಡಿಸಲು ಸೂಚಿಸಲಾಯಿತು.

BESCOM **ಸಮಸ್ಯೆ:-**

ಶ್ರೀ ಹೇಮಂತ್‌ನಾಗ್ ರವರು ಜಿ ಸ್ಟ್ರೀಟ್ ನಲ್ಲಿ ಹೈ ಮಾಸ್ಕ್ ಲೈಟ್ ದುರಸ್ತಿಯಾಗಿದ್ದು, ಇದರಿಂದ ಹೂವಿನ ವ್ಯಾಪಾರಸ್ತರಿಗೆ ಹಾಗೂ ವಾಹನ ಸವಾರರಿಗೆ ಬೀದಿ ಬದಿ ಓಡಾಡುವ ಸಾರ್ವಜನಕರಿಗೆ ತುಂಬಾ ತೊಂದರೆಯಾಗುತ್ತಿದೆ. ಶೀಘ್ರವಾಗಿ ಹೈ ಮಾಸ್ಕ್ ಲೈಟ್ ದುರಸ್ತಿಗೊಳಸಲು ಕೋರಿದರು. ನೋಡೆಲ್ ಅಧಿಕಾರಿ ವರು BESCOM AE ರವರನ್ನು ಉತ್ತರಿಸಲು ಸೂಚಿಸಿದರು. BBMP AE (ವಿದ್ಯುತ್) ರವರು ಹೈ ಮಾಸ್ಕ್ ಲೈಟ್ ವಿಚಾರವು ನನ್ನ ಗಮನಕ್ಕೆ ಬಂದಿದೆ ಅದು ಅಲ್ಲದೆ ಡಿಸಿ ಬಿಲ್‌ಗಳು ಸರಿಯಾಗಿ ಪಾವತಿಯಾಗುತ್ತಿಲ್ಲ ನಾನು ಹೊಸದಾಗಿ ಈ ವಾರ್ಡ್‌ಗೆ ಬಂದಿರುವುದರಿಂದ ಪರಿಶೀಲಿಸಿ ಮೇಲಾಧಿಕಾರಿಗಳ ಗಮನಕ್ಕೆ ತಂದು ಶೀಘ್ರವಾಗಿ ಕ್ರಮಕೈಗೊಳ್ಳಲಾಗುವುದೆಂದು ತಿಳಸಿದರು.

ಕೋವಿಡ್-19 ಸಂಬಂಧ ಸೋಂಕು ಹರಡುವಿಕೆಯನ್ನು ತಡೆಗಟ್ಟಲು ಸಂಬಂಧ
ಮುಂಜಾಗ್ರತಾ ಕ್ರಮಗಳ ಬಗ್ಗೆ ಹಾಗೂ ಹೆಚ್ಚು ಹೆಚ್ಚು ವ್ಯಾಕ್ಸಿನೇಷನ್

BWSSB ಸಮಸ್ಯೆ:-

ಕೃಷ್ಣ ಮೂರ್ತಿ ರವರು ವಾರ್ಡ್‌ನಲ್ಲಿ BWSSB ನೌಕರರಾದ ಧನುಷ್ ರವರು ಮನೆ ಮನೆಗೆ ನೀರಿನ ಬಿಲ್ ನೀಡಲಾಗಿದ್ದು, ಸದರಿ ನೀರಿನ ಬಿಲ್‌ಗಳು ಅಧಿಕ ಮೊತ್ತವನ್ನು ಒಳಗೊಂಡಿರುತ್ತದೆ ಇದನ್ನು ಸಾರ್ವಜನಿಕರು ನೀರಿನ ಬಿಲ್ ಅಧಿಕವಾಗಿ ಬರುತ್ತಿದೆಂದು ಪ್ರಶ್ನಿಸಿದರೆ ಕಛೇರಿಗೆ ಬಂದು ಸಮಸ್ಯೆಯನ್ನು ಬಗೆಹರಿಸಿ ಕೊಳ್ಳಿ ಎಂದು BWSSB ಧನುಷ್ ರವರು ತಿಳಸಿರುತ್ತಾರೆ. ಅದರೆ BWSSB ಕಛೇರಿಗೆ ಸಾರ್ವಜನಿಕರು ಹೋಗಿ ಹೆಚ್ಚುವರಿಯಾಗಿ ಬರುತ್ತಿರುವ ನೀರಿ ಬಿಲ್ ಪ್ರಶ್ನಿಸಿದಾಗಿ ಮೇಲಾಧಿಕಾರಿಗಳು ಸಮರ್ಪಕವಾಗಿ ಉತ್ತರಿಸುವುದಿಲ್ಲ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ನೋಡಲ್ ಅಧಿಕಾರಿಯವರು ಸಭೆಗೆ ಹಾಜರಿದ್ದ BWSSB ಅಧಿಕಾರಿಗಳಿಗೆ ಈ ಸಂಬಂಧ ಕ್ರಮ ತೆಗೆದುಕೊಂಡು ಸಮಸ್ಯೆ ಬಗೆಹರಿಸಬೇಕೆಂದು ಸೂಚಿಸಿದರು.

ಸೊಳ್ಳೆ ನಿಯಂತ್ರಣ ಸಮಸ್ಯೆ

ವಾರ್ಡ್‌ನಲ್ಲಿ ಸೊಳ್ಳೆಗಳ ಹವಾಳಿ ಹೆಚ್ಚಾಗಿ ಕಂಡು ಬಂದಿದೆ ಸೊಳ್ಳೆ ನಿಯಂತ್ರಣಕ್ಕಾಗಿ ಪ್ರತಿ ದಿನ ಫಾಂಗಿಗ್ ಮಾಡಬೇಕಾಗಿದೆ ವಾರ್ಡ್‌ನಲ್ಲಿ ಸರಿಯಾಗಿ ಫಾಂಗಿಗ್ ಕೆಲಸ ಮಾಡುತ್ತಿಲ್ಲ ಇದರಿಂದ ವಾರ್ಡ್‌ನಲ್ಲಿ ವಾಸಿಸುವ ಜನರಿಗೆ ಡೆಂಗ್ಯೂ ಮಲೇರಿಯಾ ಕಾಯಿಲೆಗಳು ಕಂಡು ಬರುತ್ತದೆ ಅದರಿಂದ ಪ್ರತಿ ದಿನ ವಾರ್ಡ್‌ನಲ್ಲಿ ಫಾಂಗಿಗ್ ಮಾಡಲು ಕೋರಿದರು

ನೋಡೆಲ್ ಅಧಿಕಾರಿಗಳು ರವರು ಸಂಬಂದಪಟ್ಟ ಅಧಿಕಾರಿಗೆ ಸೂಚಿಸಲಾಗುವುದೆಂದು ತಿಳಿಸಿದರು.

ಕಾನೂನು ಸುವ್ಯವಸ್ಥೆ ಬಗ್ಗೆ.

ಶ್ರೀ. ಕೃಷ್ಣಮೂರ್ತಿ ರವರು ವಾರ್ಡ್‌ನ ಪ್ರಮುಖ ರಸ್ತೆಗಳಾದ ಜಿ ಮುಖ್ಯರಸ್ತೆ ಹಾಗೂ ಕೇಂಬ್ರಿಡ್ಜ್ ರಸ್ತೆಗಳಲ್ಲಿ ಮುಂಜಾನೆ ಬೆಳಗಿನ ಜಾವ ಕಾರ್ಮಿಕರು ತಮ್ಮ ಕೆಲಸವನ್ನು ಮುಗಿಸಿಕೊಂಡು ಬರುವಾಗ ಕಳ್ಳಕಾಕರು ಅವರನ್ನು ಅಡ್ಡಕಟ್ಟಿ ಚಾಕು ಚೂರಿ ತೋರಿಸಿ ಹಣ ಒಡವೆಗಳನ್ನು ದೋಚಿ ಪರಾರಿಯಾಗುತ್ತಿರುವುದು ಕಂಡು ಬರುತ್ತದೆ ಇದರಿಂದ ಸಾರ್ವಜನಿಕರು ರಸ್ತೆಯಲ್ಲಿ ಓಡಾಡಲು ಭಯ ಬೀತರಾಗಿರುತ್ತಿದ್ದಾರೆ.

ಈ ಸಮಸ್ಯೆಯಿಂದ ದೂರಾಗಲು ಪೋಲಿಸ್ ಸುವೆವಸ್ಥೆಯನ್ನು ಚುರುಕುಗೊಳಿಸಲು ಕೋರಿದರು ನೋಡೆಲ್ ಅಧಿಕಾರಿ ರವರು ಸಂಬಂಧಪಟ್ಟ ಪೋಲಿಸ್ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಸದರಿ ವಿಷಯವನ್ನು ತಿಳಿಸಿ ಸಮಸ್ಯೆಯನ್ನು ಸರಿ ಪಡಿಸಲು ಸೂಚಿಸಿದರು ಹಾಗೂ ಮುಂದೆ ವಾರ್ಡಿನಲ್ಲಿ ಅರಕ್ಷಕರ ಗಸ್ತನ್ನು ಹೆಚ್ಚಿಸಬೇಕೆಂದು ಕೋರಿದರು.

ವಾಹನ ನಿಲುಗಡೆ ಸಮಸ್ಯೆ:

ಶ್ರೀ ಮುನಿರಾಜುರವರು ವಾರ್ಡ್‌ನ ಹಳೆಯ ಮದ್ರಾಸ್ ರಸ್ತೆ ಹಾಗೂ ಚಾನಲ್ ರಸ್ತೆಗಳಲ್ಲಿ ಎಲ್ಲಿನಿಂದಲೋ ಬಂದು ವಾಹನ ನಿಲುಗಡೆ ಮಾಡಿ ಹೊರಟು ಹೋಗುತ್ತಾರೆ. ತಿಂಗಳುಗಳಾದರು ವಾಹನಗಳನ್ನು ತೆಗೆಯುವುದಿಲ್ಲ ಇದರಿಂದ ಸಂಚಾರ ವಾಹನಗಳಿಗೆ ತೊಂದರೆಯಾಗಿ ರಸ್ತೆ ಜಾಮ್ ಆಗುವುದು ಕಂಡು ಬರುತ್ತಿದೆ ಅದ್ದರಿಂದ ಅನಧಿಕೃತವಾಗಿ ನಿಲುಗಡೆ ಮಾಡಿರುವ ವಾಹನಗಳನ್ನು ತೆರೆವುಗೊಳಸಬೇಕೆಂದು ಕೋರಿದರು. ಇದಕ್ಕೆ ನೋಡಲ್ ಅಧಿಕಾರಿಯವರು ಅರಕ್ಷಕರು ಸಂಚಾರಿ ರವರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ ಸಮಸ್ಯಯನ್ನು ಬಗೆಹರಿಸಲು ಸೂಚಿಸಿದರು.

ಮಳೆಗಾಲ ಶುರುವಾಗುತ್ತಿದೆ ತುರ್ತಾಗಿ ಚರಂಡಿಯಲ್ಲಿ ಕಸ ಗಿಡ ಬಳಗಳನ್ನು ತೆರವುಗೊಳಿಸಿ ಚರಂಡಿಯಲ್ಲಿ ನೀರು ಸುಗಮವಾಗಿ ಹೋಗಲು ವ್ಯವಸ್ಥೆ ಮಾಡಬೇಕಾಗಿ ಕೋರಿದರು. ಈ ಸಮಸ್ಯೆಯನ್ನು ಸಂಬಂದಪಟ್ಟ ಅಧಿಕಾರಿಗೆ ಸೂಚಿಸಿರುವುದಾಗಿ ನೋಡಲ್ ಅಧಿಕಾರಿಯಾವರು ತಿಳಿಸಿದರು.

ಶ್ರೀ ಕೃಷ್ಣ ಮೂರ್ತಿ ರವರು ವಾರ್ಡ್‌ನಲ್ಲಿ ತಳುವ ಗಾಡಿಗಳಿಗೆ ಲೈಸೆನ್ಸ್ ನೀಡಲಾಗಿದೆ ಎಂಬುದರ ವಿವರ ನೀಡಿ? ರಸ್ತೆಯಲ್ಲಿ ಎಲ್ಲಿಂದಲೋ ಒಂದು ತಳ್ಳುಗಾಡಿಗಳನ್ನು ನಿಲ್ಲಿಸಿಕೊಂಡಿರುತ್ತಾರೆ. ವಾಹನ ಸಂಚಾರರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ತಳ್ಳುವ ಗಾಡಿಯು ರಸ್ತೆಯಲ್ಲಿ ನಿಲುಗಡೆ ಮಾಡದೇ ವ್ಯಾಪಾರ ಮಾಡಲು ಕ್ರಮಕೈಗೊಳ್ಳಲು ಕೋರಿದರು. ಇದಕ್ಕೆ ನೋಡಲ್ ಅಧಿಕಾರಿಯವರು ಶ್ರೀ ಮೂರ್ತಿ BBMP AE ರವರಿಗೆ ಕ್ರಮತೆಗೆದುಕೊಳ್ಳಲು ಸೂಚಿಸಿದರು.

ಮತದಾರರ ಪಟ್ಟಿಯಲ್ಲಿ ಹೊಸದಾಗಿ ಸೇರ್ಪಡೆ ಪರಿಷ್ಕರಣೆ ತೆಗೆದು ಹಾಕಲು ಫಾರಂ6, 7, 8, 8ಎ ನೀಡಲು ಈಗಾಗಲೇ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ವಾಡ್‌ನಲ್ಲಿ ಸೂಕ್ತ ಕ್ರಮಕೈಗೊಳ್ಳಲು ಸಂಬಂದಪಟ್ಟ ಸಹಾಯಕ ಕಂದಾಯ ಅಧಿಕಾರಿ (ದೊಮ್ಮಲೂರು) ಹಾಗೂ ಕಂದಾಯ ಅಧಿಕಾರಿ (ಶಾಂತಿನಗರ) ಅಧಿಕಾರಿ ರವರನ್ನು ಸೂಚಿಸಲು ಕೋರಿದರು. ನೋಡಲ್ ಅಧಿಕಾರಿಯವರು ಸಹಾಯಕ ಕಂದಾಯ ಅಧಿಕಾರಿ ರವರಿಗೆ ದೂರವಾಣಿ ಮುಖಾಂತರ ಕ್ರಮ ತೆಗೆದುಕೊಳ್ಳಲು ಸೂಚಿಸಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಶ್ರೀ ಮೂರ್ತಿ BBMP AE ರವರ ವಂದಾನಾರ್ಪಣೆಯಿಂದ ಸಭೆಯನ್ನು ಮುಕ್ತಾಯಗೊಳಿಸಿದರು.

ನೊಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ–89– ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–89– ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ